ರಾಜ್ಯದಲ್ಲಿ ಹೊಸ ಕೃಷಿ ನೀತಿ.

1553 (2210) ಶ್ರೀ ಪಾಟೀಲ್ ಶಿವಾನಂದ ಸಿದ್ರಾಮಪ್ಪ (ತಿಕೋಟ) :— ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಹೊಸ ಕೃಷಿ ನೀತಿ ಘೋಷಣೆಯಾದ ಮೇಲೆ ಆದಂತಹ ಮಹತ್ತರವಾದ ಬದಲಾವಣೆಗಳಾವುವು?

ಆ) ಹೊಸ ಕೃಷಿ ನೀತಿ ಘೋಷಣೆಯಾದ ನಂತರ ನೇಮಕಾತಿ ಮಾಡಿಕೊಂಡಿರುವ ಸಂಖ್ಯೆ ಎಷ್ಟು?

ಇ) ರಾಜ್ಯದಲ್ಲಿ ಇರುವ ಕೃಷಿ ಸಹಾಯಕರ ಹುದ್ದೆಗಳ ಸಂಖ್ಯೆ ಎಷ್ಟು? ಅದರಲ್ಲಿ ಕಾರ್ಯನಿರ್ವಹಿಸುತ್ತಿರುವವರೆಲ್ಲರೂ ಕೃಷಿ ಪದವೀಧರರೇ?

ಈ) ಕಳೆದ 4 ವರ್ಷಗಳಲ್ಲಿ ನಿವೃತ್ತಿಯಾದ ಕೃಷಿ ಸಹಾಯಕರ ಸಂಖ್ಯೆ ಎಷ್ಟು?

ಉ) ಈ ನಾಲ್ಕು ವರ್ಷಗಳಲ್ಲಿ ಕೃಷಿ ಸಹಾಯಕರನ್ನಾಗಿ ನೇಮಕಾತಿ ಮಾಡಿಕೊಂಡ ಕೃಷಿ ಪದವೀಧರರ ಸಂಖ್ಯೆ ಎಷ್ಟು?

ಶ್ರೀ ಸಿ. ಬೈರೇಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :—

ಅ) ರಾಜ್ಯದಲ್ಲಿ ಹೊಸ ಕೃಷಿ ನೀತಿಯನ್ನು ಘೋಷಿಸಿದ ನಂತರ ಕೃಷಿ ಇಲಾಖೆಗೆ ಸಂಬಂಧಪಟ್ಟಂತೆ ಆಗಿರುವ ಮಹತ್ತರವಾದ ಬದಲಾವಣೆಗಳು ಕೆಳಕಂಡಂತಿವೆ.

1) ಸಾವಯವ ಕೃಷಿಯ ಸಂಶೋಧನೆ ಮತ್ತು ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗಿದೆ.

2) ಭೂಸಾರ ಮತ್ತು ಜಲಸಂರಕ್ಷಣೆಗೆ ಮತ್ತು ಉದ್ಯೋಗ ದೊರಕಿಸಲು ಜಲಾನಯನ ಅಭಿವೃದ್ಧಿ ಯೋಜನೆಗಳಿಗೆ ಆದ್ಯತೆ ನೀಡಲಾಗಿದೆ.

3) ಕರ್ನಾಟಕ ಕೃಷಿ ಅಭಿವೃದ್ಧಿ ಹಣಕಾಸು ನಿಗಮವನ್ನು ಸ್ಥಾಪಿಸಲಾಗಿದೆ.

4) ರೈತರ ಮನವರಿಕೆಯನ್ನು ಹೆಚ್ಚಿಸಲು ನೈಸರ್ಗಿಕ ಬೇಸಾಯ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

5) ಕೃಷಿಯಲ್ಲಿ ಸಾಮರ್ಥ್ಯವನ್ನು ಹೆಚ್ಚಿಸಲು ಯಂತ್ರಚಾಲಿತ ಸುಧಾರಿತ ಮತ್ತು ಸಣ್ಣ ಕೈಚಾಲಿತ ಕೃಷಿ ಉಪಕರಣಗಳನ್ನು ವಿತರಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

6) ಕೃಷಿ ಉತ್ಪನ್ನಗಳ ರಫ್ತುಸಾಧ್ಯತೆಯನ್ನು ಹೆಚ್ಚಿಸಲು "ಕರ್ನಾಟಕ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮ" ವನ್ನು ಸ್ಥಾಪಿಸಲಾಗಿದೆ.

ತೋಟಗಾರಿಕೆ ಇಲಾಖೆಗೆ ಸಂಬಂಧಿಸಿದಂತೆ ಕೃಷಿ ನೀತಿಯನ್ನು ಜಾರಿಗೆ ತರುವ ಮುನ್ನ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ 13.93 ಲಕ್ಷ ಹೆಕ್ಟೇರ್‌ಗಳಿದ್ದು, ಉತ್ಪಾದನೆ 109.47 ಲಕ್ಷ ಟನ್‌ಗಳಷ್ಟಿತ್ತು. 1996-97ನೇ ಸಾಲಿಗೆ ತೋಟಗಾರಿಕೆ ಬೆಳೆಗಳ ವಿಸ್ತೀರ್ಣ ಮತ್ತು ಉತ್ಪಾದನೆ ಅನುಕ್ರಮವಾಗಿ 15.80 ಲಕ್ಷ ಹೆ. ಮತ್ತು 124.04 ಲಕ್ಷ ಟನ್‌ಗಳಿಗೆ ಹೆಚ್ಚುವರಿಯಾಗಿರುತ್ತದೆ. ಹಾಗೂ 1997-98ನೇ ಸಾಲಿಗೆ ತೋಟಗಾರಿಕೆ ಬೆಳೆ ಪ್ರದೇಶವು 17.17 ಲಕ್ಷ ಹೆ. ಮತ್ತು ಉತ್ಪಾದನೆ 128.06 ಲಕ್ಷ ಟನ್‌ಗಳಿಗೆ ಅಂದಾಜಿಸಲಾಗಿದೆ.

ರಾಜ್ಯ ಕೃಷಿ ನೀತಿಯಲ್ಲಿ ತಾಳೆ ಬೆಳೆ ಪ್ರದೇಶವನ್ನು 20,000 ಹೆ. ಪ್ರದೇಶದಲ್ಲಿ ಬೆಳೆಯಲು ಶಿಫಾರಸ್ಸು ಮಾಡಲಾಗಿತ್ತು, ಆದರೆ ಈ ಯೋಜನೆಯಡಿ ಭಾಗವಹಿಸಿದ್ದ ಕೆಲವು ಕಂಪನಿಗಳು ಹಿಂದಕ್ಕೆ ಸರಿದಿದ್ದರಿಂದ ಈ ಯೋಜನೆಯ ಅಭಿವೃದ್ಧಿಗೆ ಒಟ್ಟಾರೆ ಹಿನ್ನೆಡೆ ಉಂಟಾಗಿರುತ್ತದೆ. ಆದಾಗ್ಯೂ ಈವರೆಗೂ 8000 ಹೆ. ಪ್ರದೇಶದಲ್ಲಿ ತಾಳೆ ಬೆಳೆಯನ್ನು ರೈತರ ಜಮೀನಿನಲ್ಲಿ ತರಲಾಗಿದೆ. ಈಗ ಮತ್ತೆ ಆಸಕ್ತಿ ಇರುವ ಕಂಪನಿಗಳನ್ನು ಗುರುತಿಸಿ ರಾಜ್ಯದ ವಿವಿಧ ನೀರಾವರಿ ಅಚ್ಚುಕಟ್ಟು ಪ್ರದೇಶದಲ್ಲಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಮಂಜೂರಾತಿ ನೀಡಲಾಗಿದ್ದು, ಈ ಕಂಪನಿಗಳು ಕಾರ್ಯೋನ್ಮುಖವಾಗಿವೆ.

ಅ) ಹೊಸ ಕೃಷಿ ನೀತಿ ಘೋಷಣೆಯಾದ ನಂತರ ಕೃಷಿ ಇಲಾಖೆಯಲ್ಲಿ- 317 ಮಂದಿಯನ್ನು ಮತ್ತು ತೋಟಗಾರಿಕೆ ಇಲಾಖೆಯಲ್ಲಿ 388 ಮಂದಿಯನ್ನು ವಿವಿಧ ಹುದ್ದೆಗಳಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿದೆ.

ಆ) ರಾಜ್ಯದಲ್ಲಿ ಹಾಲಿ 4853 ಕೃಷಿ ಸಹಾಯಕರ ಹುದ್ದೆಗಳಿರುತ್ತವೆ. ಅವರೆಲ್ಲರೂ ಕೃಷಿ ಪದವೀಧರರಲ್ಲ.

ಇ) ಕಳೆದ ನಾಲ್ಕು ವರ್ಷಗಳಲ್ಲಿ ಒಟ್ಟು 96 ಮಂದಿ ಕೃಷಿ ಸಹಾಯಕರು ನಿವೃತ್ತರಾಗಿರುತ್ತಾರೆ.

ಈ) ಯಾರನ್ನೂ ನೇಮಕ ಮಾಡಿರುವುದಿಲ್ಲ.

ಬೆಂಗಳೂರು ನಗರ ಸಾರಿಗೆ ಕಾವೇರಿ ಮಹಡಿ ಬಸ್.

1554(2145) ಶ್ರೀ ರಾಮಲಿಂಗಾರೆಡ್ಡಿ (ಜಯನಗರ) :— ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೆಂಗಳೂರಿನ ಪ್ರೇಕ್ಷಣೀಯ ಸ್ಥಳಗಳನ್ನು ತೋರಿಸಲು ಬೆಂಗಳೂರು ನಗರ ಸಾರಿಗೆ ಕಾವೇರಿ ಬಸ್ ಸೌಲಭ್ಯವನ್ನು ಒದಗಿಸುತ್ತಿದೆಯೇ?